**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸ್ಪೆಷಲ್ ಸಿ. ನಂ.145/2023</u>**

ದಿನಾಂಕ 20.08.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 11    ಪ್ರಾಸಾ - 9

| | | |
|---|---|---|
| ಹೆಸರು | ಃ | ರಮೇಶ್ ಪೋಲಾದಿ |
| ತಂದೆಯ ಹೆಸರು | ಃ | ಗುಂಡಪ್ಪ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಪಿ.ಸಿ.171, ತಾವರೆಕೆರೆ ಪೊಲೀಸ್ ಠಾಣೆ |
| ವಾಸಸ್ಥಳ | ಃ | ತಾವರೆಕೆರೆ |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ಜುಲೈ 2023 ರಿಂದ ಅಕ್ಟೋಬರ್ 2024 ರವರೆಗೆ ನಾನು ಮಾಗಡಿ ಉಪ ವಲಯದ ಡಿವೈಎಸ್‌ಪಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ಈ ಪ್ರಕರಣದ ತನಿಖಾಧಿಕಾರಿ ಡಿವೈಎಸ್‌ಪಿ ರವರು ದಿನಾಂಕ 01.08.2023, 21.08.2023, 28.08.2023, 12.09.2023 ಮತ್ತು 15.09.2023 ರಂದು ತನಿಖೆಗೆ ಸಂಬಂಧಿಸಿದಂತೆ ಮಹಜರ್ ಕ್ರಮ ಜರುಗಿಸುವ ಸಮಯುದಲ್ಲಿ ಮತ್ತು ಸಾಕ್ಷಿದಾರರ ಹೇಳಿಕೆ ಪಡೆಯುವ ಸಮಯದಲ್ಲಿ ನನಗೆ ವಿಡಿಯೋ ಚಿತ್ರೀಕರಣ ಮಾಡುವಂತೆ ಮೌಖಿಕವಾಗಿ ಆದೇಶಿಸಿರುತ್ತಾರೆ. ಅದರನ್ವಯ ನಾನು ತನಿಖಾ ಸಮಯದಲ್ಲಿ ನಿಶಾನೆ ಪಿ 5 ಮತ್ತು 6 ಫೋಟೋವನ್ನು ನಾನು ನಮ್ಮ ಕಛೇರಿಯ ಸೋನಿ ಹ್ಯಾಂಡಿ ಕ್ಯಾಮೆರಾದಲ್ಲಿ ತೆಗೆದಿರುತ್ತೇನೆ. ಸಾಕ್ಷಿದಾರರ ಹೇಳಿಕೆ ಪಡೆಯುವ ಸಮಯದಲ್ಲಿ ಅದನ್ನು ವಿಡಿಯೋ ಚಿತ್ರೀಕರಣ ಮಾಡಿದ್ದು, ನಂತರ ಅದನ್ನು ಸಿಡಿಗೆ ಅಳವಡಿಸಿಕೊಟ್ಟಿರುತ್ತೇನೆ. ಸದರಿ ಸಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 18 ಎಂದು ಗುರುತಿಸಲಾಯಿತು.

3. ಪಂಚನಾಮೆಯ ಸಮಯದಲ್ಲಿ ತೆಗೆದಂತಹ ಫೋಟೋಗಳನ್ನು ಕ್ಯಾಮೆರಾದಿಂದ ಕಂಪ್ಯೂಟರ್ ಮೂಲಕ ಸಿಡಿ ಮಾಡಿ ಕೊಟ್ಟಿರುತ್ತೇನೆ. ಫೋಟೋ ತೆಗೆಯುವ ಸಮಯದಲ್ಲಿ ಮತ್ತು ಅದನ್ನು ಕಂಪ್ಯೂಟರ್ ಮೂಲಕ ಸಿಡಿಗೆ ವರ್ಗಾವಣೆ ಮಾಡಿ ಕೊಡುವ ಸಮಯದಲ್ಲಿ ಕ್ಯಾಮೆರಾ ಮತ್ತು ಕಂಪ್ಯೂಟರ್ ನ ಸ್ಥಿತಿ ಗತಿ ಸುಸ್ಥಿತಿಯಲ್ಲಿತ್ತು. ಅದಕ್ಕೆ ಸಂಬಂಧಿಸಿದಂತೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65ಬಿ ರನ್ವಯ ಪ್ರಮಾಣ ಪತ್ರವನ್ನು ಸಹ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ದಿನಾಂಕ 01.08.2023 ರಂದು ಮಹಜರ್ ಕ್ರಮ ಜರುಗಿಸಿದಂತಹ ಸಮಯದಲ್ಲಿ ತೆಗೆದಂತಹ ಫೋಟೋಗಳಿಗೆ ಸಂಬಂಧಿಸಿದಂತೆ ಬೆರಳಚ್ಚು ಮಾಡುವಾಗ 02.08.2023 ಎಂದು ಕೈತಪ್ಪಿನಿಂದ ಮುದ್ರಿತವಾಗಿರುತ್ತದೆ. ಸದರಿ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ19 ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 19(ಎ) ಎಂದು ಗುರುತಿಸಲಾಯಿತು .

<u>**ಪಾಟೀ ಸವಾಲುಃ ಶ್ರೀ.ಟಿ.ಜಿ., ವಕೀಲರಿಂದ ಆರೋಪಿಗಳ ಪರವಾಗಿಃ**</u>

4. ನಿಶಾನೆ ಪಿ 5 ಮತ್ತು 6 ರಲ್ಲಿ ಫೋಟೋ ತೆಗೆದಂತಹ ತಾರೀಖು ದಿನಾಂಕ, ಸಮಯ ಮತ್ತು ಸ್ಥಳದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ. ಕ್ಯಾಮೇರಾದಿಂದ ಅಥವಾ ಮೊಬೈಲ್ ನಿಂದ ಫೋಟೋ ತೆಗೆದಾಗ ಅಥವಾ ವಿಡಿಯೋ ಚಿತ್ರೀಕರಣ ಮಾಡಿದಾಗ ದಿನಾಂಕ ಮತ್ತು ಸಮಯ ಅದರಲ್ಲಿ ಕಾಣಿಸುತ್ತದೆ ಎಂದರೆ ಸರಿಯಲ್ಲ. ನಿಶಾನೆ ಪಿ 19 ನ್ನು ಕಛೇರಿಯಲ್ಲೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕಛೇರಿಯಲ್ಲಿ ಇಟ್ಟುಕೊಂಡಿರುವಂತಹ ನಮೂನೆ ಫಾರ್ಮ್ ನ್ನು ಭರ್ತಿ ಮಾಡಿ ನಿಶಾನೆ ಪಿ 19 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಫೋಟೋವನ್ನು ಮತ್ತು ನಿಶಾನೆ ಪಿ 19 ನ್ನು ಠಾಣೆಯಲ್ಲೇ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

5. ನಾನು ಸಾಕ್ಷಿದಾರರು ಹೇಳಿಕೆ ನೀಡುವಂತಹ ವಿಡಿಯೋ ಚಿತ್ರೀಕರಣವನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ 18 ಸಿಡಿಯಲ್ಲಿ ಪ್ರಕರಣಕ್ಕೆ

ಅನುಕೂಲವಾಗುವಂತಹ ಹೇಳಿಕೆಯ ಭಾಗವನ್ನು ಮಾತ್ರ ಚಿತ್ರೀಕರಿಸಿಕೊಂಡು ಅದನ್ನು ಎಡಿಟ್ ಮಾಡಿ ನೀಡಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**